ಊರಿನ ಎಲ್ಲ ಜಾತಿಯ ಜನ ಏಕವಾಗಿ ಕುಳಿತು ಆಚರಿಸುವ ಸಾಮೂಹಿಕ ಏಕತೆಯ ಆಚರಣೆ ಇದು. ಎಲ್ಲರ ನಡುವೆ ಜಾಡಿ ಹಾಸಿ, ಅದರ ಮೇಲೆ ಹಣತೆ ಹಚ್ಚಿಟ್ಟು ಮುತ್ಯಾಲಪ್ಪ ತನ್ನ ಕೈಯಲ್ಲಿ ಏಕತಾರಿಯನ್ನು ಮೀಟುತ್ತಾ ಭಜನೆ ಪದ ಶುರು ಮಾಡಿದನೆಂದರೆ, ಅಲ್ಲಿ ಕಲ್ಲು ಕರಗಿ ನೀರಾಗಿ ಹರಿಯುತ್ತಿತ್ತು. ಮಣೆಗಾರ ಸಿವುಡಯ್ಯನ ದಮ್ಮಡಿ, ಬುಂಡೆ ಬೆಸ್ತರ ನಾಗಣ್ಣ ಮತ್ತು ನೆವ್ವಾರರ ಕಾಡಯ್ಯನವರ ತಾಳ ಎಲ್ಲವೂ ಅಲ್ಲಿ ಹೊಸ ಲೋಕವನ್ನೇ ಸೃಷ್ಟಿಸುತ್ತಿದ್ದವು. ಹೀಗೆ ಊರಿನವರ ನಡುವಿದ್ದ ಭ್ರಾತೃತ್ವ, ಹೊಂದಾಣಿಕೆ ಹಾಗೂ ನಂಬುಗೆಗಳನ್ನು ಅವರ ಹಾಡುಗಳು ಇನ್ನಷ್ಟು ಭದ್ರ ಪಡಿಸುತ್ತಾ ಹೋಗುತ್ತಿದ್ದವು. ಇಂತಹ ಅಡಿಪಾಯದ ಮೇಲೆ ಹಿರೀಕರು ಆ ಊರನ್ನು ಕಟ್ಟಿದ್ದರು.

ನಮ್ಮೂರಿನಲ್ಲಿ ಪೀರ್ಲ ಹಬ್ಬ ಆಚರಿಸುವ ಗುಡಿಯೂ ಇದೆ. ಆಶ್ಚರ್ಯದ ಸಂಗತಿಯೆಂದರೆ ನಮ್ಮ ಊರಿನಲ್ಲಿ ಮುಸ್ಲಿಮರ ಒಂದೇ ಒಂದು ಕುಟುಂಬವೂ ಇಲ್ಲ! ಆದರೂ ಪೀರ್ಲ ಹಬ್ಬವನ್ನು ಅದ್ದೂರಿಯಾಗಿ ಆಚರಿಸುವ ಸಂಪ್ರದಾಯ ಇಂದಿಗೂ ಇದೆ. ಇಂಥ ಊರುಗಳಲ್ಲೇ ಧರ್ಮ ಮತ್ತು ಆಚರಣೆಗಳು ಜನರನ್ನು ಆಳವಾಗಿ ಬೆಸೆಯುತ್ತವೆ. ಯಾವ ತತ್ತ್ವಜ್ಞಾನಿಯ ಅವಶ್ಯಕತೆಯಿಲ್ಲದೆ ಮಾನವಕುಲ ಒಂದೇ ಎನ್ನುವಂತೆ ಗುಡಿಹಳ್ಳಿ ಬಾಳುತ್ತಿದೆ. ಪೀರ್ಲ ಹಬ್ಬದ ಕೊನೆಯ ದಿನ ಇಡೀ ಊರು ಮದುಮಗನಂತೆ ಸಿಂಗರಿಸಿಕೊಳ್ಳುತ್ತದೆ. ಇದಕ್ಕಾಗಿ ಪ್ರತಿ ಮನೆಯಿಂದಲೂ ಒಂದೊಂದು ಹುಲಿಗಳು ಸಿದ್ಧವಾಗುತ್ತವೆ. ಹುಲಿಗಳನ್ನು ಊರಿನ ತುಂಬಾ ಕುಣಿಸಲು ನಮ್ಮ ಊರಿನ ಮಣೆಗಾರರ ತಪ್ಪಟೆಗಳು, ಚಲವಾದಿಗಳ ಚಮ್ಮಾಳ, ಉರುಮೆಗಳು ಧ್ವನಿ ಮಾಡುತ್ತವೆ. ತಪ್ಪಟೆ ಹಾಗೂ ಉರುಮೆಯ ಶಬ್ದಕ್ಕೆ ಹೆಜ್ಜೆ ಹಾಕುವ ದೊಡ್ಡಹುಲಿ, ಮರಿಹುಲಿಗಳು ಆಕಾಶಕ್ಕೆ ಒಂದು ಕಾಲು, ಭೂಮಿಗೆ ಒಂದು ಕಾಲು ಹಾಕುತ್ತಾ ಕುಣಿಯುತ್ತವೆ. ಅಂದು ವಿಶೇಷವಾಗಿ ಊರಿನ ಹರೆಯದ ಹೆಣ್ಣುಮಕ್ಕಳ ಕನಸಿನಲ್ಲಿ ಕೆಲವು ಪ್ರಾಯದ ಹುಲಿಗಳು ಸುಳಿಯುತ್ತಿದ್ದವಂತೆ! ಜೊತೆಗೆ ಕೋಲಾಟದ ತಂಡಗಳು ಹಾಕುವ ಹೆಜ್ಜೆಗಳ ಗತ್ತನ್ನು ನೋಡುವುದೇ ಚಂದ. ಇವರುಗಳ ಜೊತೆಗೆ ಚೆನ್ನಮಲ್ಲನ ಸನಾಯಿ, ಪಲ್ಲಕ್ಕಿ ಅಜ್ಜನ ಉರುಮೆ, ತಿಪ್ಪಯ್ಯನ ಕಹಳೆ, ಚಿಕ್ಕರಂಗಪ್ಪನ ತಪ್ಪಟೆ ಇವೆಲ್ಲವೂ ಮೆರವಣಿಗೆಯ ಮುಂದೆ ಬರುತ್ತಿದ್ದವು. ವಿಶೇಷವಾಗಿ ಚೆನ್ನಮಲ್ಲನ ಸನಾಯಿ ಎಂಥವರನ್ನೂ ಗುಂಗು ಹಿಡಿಸುತ್ತಿತ್ತು! ನಮ್ಮ ಊರಿನ ಅನೇಕ ಹಿರೀಕರು ಅವನ ಸನಾಯಿ ವಾದನವನ್ನು ಕೇಳಲೆಂದು ಅವನ ಹಿಂದೆ ಹಿಂದೆಯೇ ಬರುತ್ತಿದ್ದರು.

ಮುಖ್ಯ ವಿಷಯ ಎಂದರೆ, ನಮ್ಮೂರಿನಲ್ಲಿ ಯಾವ ಕಾಲದಲ್ಲೂ ನಗದು ವ್ಯಾಪಾರ ಎಂಬುದೇ ಇರಲಿಲ್ಲ! ಯಾರ ಬಳಿಯಲ್ಲಿಯೂ ನೋಟನ್ನಾಗಲಿ ಅಥವಾ ಪಾವಲಿ, ಒಂದು ರೂಪಾಯಿ ಬಂದವನ್ನಾಗಲೀ ನಾನು ಕಂಡಿರಲಿಲ್ಲ ಎಂದು ಇಲ್ಲಿಯೇ ಹುಟ್ಟಿ ಬೆಳೆದ ಗೋವಿಂದರಾಜು ಹೇಳುವರು. ಎಲ್ಲವೂ ವಸ್ತುಗಳ ವಿನಿಮಯೊಂದಿಗೆ ವ್ಯಾಪಾರ ನಡೆಯುತ್ತಿತ್ತು. ನಮ್ಮೂರಿನಲ್ಲಿ ಗೂಡಂಗಡಿ ಮತ್ತು ಮಂಡಕ್ಕಿ-ಮೆಣಸಿನಕಾಯಿ ಜೊತೆಗೆ ಟೀ ಕೊಡಲು ಇದ್ದ ಏಕೈಕ ಅಂಗಡಿ ಎಂದರೆ, ನೆವ್ವಾರರ ಪೈಕಿಯ ಅಂಗಡಿ ನರಸಿಂಹಪ್ಪನದು. ಗೂಡಂಗಡಿಗೆ ಹೋದ ಹೆಂಗಸರು ತಮ್ಮ ಮನೆಯಲ್ಲಿದ್ದ ಭತ್ತ, ರಾಗಿ, ಹುಣಸೆಹಣ್ಣು, ಹೊಂಗೆಬೀಜ, ತೆಂಗಿನಕಾಯಿ, ಶೇಂಗಾ ಅಥವಾ ತೊಗರಿ ಇಂಥದ್ದೇ ಪುಡಿ ದಿನಸಿಗಳನ್ನು ಗಂಟು ಕಟ್ಟಿಕೊಂಡು ತಂದು ಅಂಗಡಿ ನರಸಿಂಹಪ್ಪನ ಮುಂದೆ ಸುರಿಯುತ್ತಿದ್ದರು. ಅವನು ತನ್ನದೇ ಆದ ಲೆಕ್ಕದಲ್ಲಿ ಅವುಗಳಿಗೆ ಬೆಲೆ ಕಟ್ಟಿ 'ನೋಡಮ್ಮ ಇದಕ್ಕೆ ಇಷ್ಟು ರೂಪಾಯಿ ಬರ್‍ತೈತೆ. ಇಷ್ಟಕ್ಕೆ ಏನ ಬತ್ತದೋ ಅದನ್ನೇ ತೆಗೆದುಕೊಂಡು ಹೋಗು' ಎಂದು ಹೇಳುತ್ತಿದ್ದ. ಅದರಂತೆ ಮನೆಗೆ ಬೇಕಾದ್ದನ್ನು ಕೊಳ್ಳುತ್ತಿದ್ದರು. ಕೊನೆಯಲ್ಲಿ ತಮ್ಮ ಜೊತೆಗೆ ಬಂದ ಮಕ್ಕಳಿಗೆ ಬೆಲ್ಲದ ಮಿಠಾಯಿಯನ್ನೋ, ಪುರಿ ಉಂಡೆಯನ್ನೋ ಕೊಡಿಸುವುದನ್ನು ಮರೆಯುತ್ತಿರಲಿಲ್ಲ. ಏನೂ ಇಲ್ಲದಿದ್ದರೆ ನರಸಿಂಹಪ್ಪ ಮಕ್ಕಳ ಕೈಗೆ ಬೆಲ್ಲದ ಚೂರನ್ನು ಕೊಟ್ಟು ಕಳುಹಿಸುತ್ತಿದ್ದ.

ನರಸಿಂಹಪ್ಪನ ಅಂಗಡಿ ಸಂಜೆ ನಾಲ್ಕರ ನಂತರ ಹೋಟೆಲ್ ಆಗಿ ಪರಿವರ್ತನೆಯಾಗುತ್ತಿತ್ತು. ಹೋಟೆಲ್ ವ್ಯವಹಾರ ಏನಿದ್ದರೂ ಗಂಡಸರಿಗೆ ಮಾತ್ರ ಮೀಸಲಾಗಿತ್ತು. ತೋಟ, ಹೊಲ, ಬಯಲುಗಳಿಗೆ, ಸೌದೆ ಕಡಿದು ತರಲು ಹೋದವರು ಊರಿಗೆ ಬರುತ್ತಿದ್ದುದೇ ಸಂಜೆ ನಾಲ್ಕು ಗಂಟೆಯ ನಂತರ. ಕೆಲಸ